# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1601 |
| ಮಾನ್ಯ ಸದಸ್ಯರ ಹೆಸರು | ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 21-03-2025 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2023-24 ಮತ್ತು 24-25 ನೇ ಸಾಲಿನಲ್ಲಿ ಅತಿ ಹಿಂದುಳಿದ ಪ್ರವರ್ಗ ಒಂದರ ಜಾತಿಗಳಲ್ಲಿ ಯಾವ ಯಾವ ಜಾತಿಗಾಗಿ ಕುಶಾಸ್ತ್ರೀಯ ಅಧ್ಯಯನ ನಡೆಸಲು ಎಷ್ಟು ಅನುದಾನವನ್ನು ನಿಗದಿಪಡಿಸಲಾಗಿದೆ: (ಜಾತಿವಾರು ಮಾಹಿತಿ ನೀಡುವುದು) | 2023-24ನೇ ಸಾಲಿನ ಸನ್ಮಾನ್ಯ ಮುಖ್ಯಮಂತ್ರಿಗಳ ಆಯವ್ಯಯ ಭಾಷಣದಲ್ಲಿ ಹಿಂದುಳಿದ ವರ್ಗಗಳಲ್ಲೇ ಅತ್ಯಂತ ಹಿಂದುಳಿದವರಾಗಿರುವ ಅಲೆಮಾರಿ ಮತ್ತು ಅರೆ-ಅಲೆಮಾರಿ ಸಮುದಾಯದವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ದಿಸೆಯಲ್ಲಿ ಸದರಿ ಜಾತಿಗಳ ಕುಲಶಾಸ್ತ್ರೀಯ ಅಧ್ಯಯನವನ್ನು ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆಯ ಮುಖಾಂತರ ಕೈಗೊಳ್ಳಲು ರೂ.2.00 ಕೋಟಿಗಳ ಅನುದಾನವನ್ನು ನೀಡಲಾಗುವುದು ಎಂದು ಘೋಷಿಸಲಾಗಿರುತ್ತದೆ.<br><br>ಸರ್ಕಾರದ ದಿನಾಂಕ:07-02-2024ರ ಆದೇಶದಲ್ಲಿ ಅಲೆಮಾರಿ ಮತ್ತು ಅರೆ-ಅಲೆಮಾರಿ ಸಮುದಾಯದವರನ್ನು ಸಮಾಜದ ಮುಖ್ಯ ವಾಹಿನಿಗೆ ತರುವ ದಿಸೆಯಲ್ಲಿ ಈ ಜಾತಿಗಳ ಕುಲಶಾಸ್ತ್ರೀಯ ಅಧ್ಯಯನವನ್ನು ಡಿ.ದೇವರಾಜ ಅರಸು ಸಂಶೋಧನಾ ಸಂಸ್ಥೆಯ ಮುಖಾಂತರ ಕೈಗೊಳ್ಳಲು ರೂ.2.00ಕೋಟಿಗಳ ಅನುದಾನವನ್ನು ಬಿಡುಗಡೆ ಗೊಳಿಸಲಾಗಿರುತ್ತದೆ. ಆದರೆ, ಸದರಿ ಸಾಲಿನಲ್ಲಿ ಆಡಳಿತಾತ್ಮಕ ಕಾರಣಗಳಿಂದ ಅಧ್ಯಯನ ನಡೆಯದೇ ರೂ.2.00 ಕೋಟಿಗಳ ಅನುದಾನವು ವ್ಯಪಗತವಾಗಿ ಸರ್ಕಾರಕ್ಕೆ ಅಧ್ಯರ್ಪಣೆಯಾಗಿತ್ತು.<br><br>ಆದರೆ, 2023-24 ನೇ ಸಾಲಿನಲ್ಲಿ ಈ ಸಂಸ್ಥೆಗೆ ಪ್ರತ್ಯೇಕವಾಗಿ ಬಿಡುಗಡೆಯಾಗಿದ್ದ ರೂ.18.75 ಲಕ್ಷಗಳ ಅನುದಾನದಲ್ಲಿ ಪ್ರವರ್ಗ-2(ಎ) ರಡಿ ಬರುವ ಈಡಿಗ ಬಿಲ್ಲವ ಸೇರಿದಂತೆ ಒಟ್ಟು 26 ಉಪಪಂಗಡಗಳ ಕುಲಶಾಸ್ತ್ರೀಯ ಅಧ್ಯಯನವನ್ನು ಮೈಸೂರು ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಕೈಗೊಳ್ಳಲಾಗಿರುತ್ತದೆ.<br><br>2024-25ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕುಲಶಾಸ್ತ್ರೀಯ ಅಧ್ಯಯನ ನಡೆಸಲು ಈ ಸಂಸ್ಥೆಗೆ ಒಟ್ಟು ರೂ.1,46,18,600-00 (ಒಂದು ಕೋಟಿ ನಲವತ್ತಾರು ಲಕ್ಷದ ಹದಿನೆಂಟು ಸಾವಿರದ ಆರುನೂರು ರೂಪಾಯಿಗಳುಮಾತ್ರ)ಗಳು ಬಿಡುಗಡೆಯಾಗಿದ್ದು, ಪ್ರವರ್ಗ-1 ರಡಿ ಬರುವ ಹಿಂದುಳಿದ ಅಲೆಮಾರಿ / ಅರೆ - ಅಲೆಮಾರಿ ಜನಾಂಗಗಳಿಗೆ ಸೇರಿದ |

<table>
<tr>
<td></td>
<td></td>
<td>ಒಟ್ಟು 8 ಜನಾಂಗಗಳ ಹಾಗೂ ನಧಾಫ್/ಪಿಂಜಾರ ಜನಾಂಗದ ಕುಲಶಾಸ್ತ್ರೀಯ ಅಧ್ಯಯನವನ್ನು ಈ ಕೆಳಕಂಡಂತೆ ಕೈಗೊಳ್ಳಲಾಗಿರುತ್ತದೆ.
<table>
<tr><th>ಕ್ರ ಸಂ</th><th>ಜನಾಂಗ</th><th>ಸಹಯೋಗ</th><th>ಅನುದಾನ (ರೂ.)</th></tr>
<tr><td>1)</td><td>ಗೋಪಾಲ</td><td>ಮೈಸೂರು ವಿಶ್ವವಿದ್ಯಾಲಯ</td><td>13,00,000-00</td></tr>
<tr><td>2)</td><td>ಬಾಜಿಗರ್</td><td>ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವಿದ್ಯಾಲಯ, ಬಳ್ಳಾರಿ</td><td>13,00,000-00</td></tr>
<tr><td>3)</td><td>ಶಿಕ್ಕಲಿಗರ್</td><td>ಕರ್ನಾಟಕ ಜಾನಪದ ವಿಶ್ವವಿದ್ಯಾಲಯ</td><td>13,20,000-00</td></tr>
<tr><td>4)</td><td>ನಂದಿವಾಲ-ಜೋಷಿ-ಫುಲ್‌ಮಾಲಿ</td><td>ತುಮಕೂರು ವಿಶ್ವವಿದ್ಯಾಲಯ</td><td>13,00,000-00</td></tr>
<tr><td>5)</td><td>ಫೀಸಾಡಿ</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬಳ್ಳಾರಿ</td><td>13,00,000-00</td></tr>
<tr><td>6)</td><td>ಹಾವಾಡಿಗ</td><td>ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ಬೆಂಗಳೂರು</td><td>13,00,000-00</td></tr>
<tr><td>7)</td><td>ಗಾರುಡಿಗ</td><td>ತುಮಕೂರು ವಿಶ್ವವಿದ್ಯಾಲಯ</td><td>10,90,200-00</td></tr>
<tr><td>8)</td><td>ಬೈಲು ಪತ್ತಾರ</td><td>ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ಬೆಂಗಳೂರು</td><td>11,71,,600-00</td></tr>
<tr><td>9)</td><td>ನದಾಫ್ /ಪಿಂಜಾರ</td><td>ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ</td><td>45,36,800-00</td></tr>
</table>
</td>
</tr>
<tr>
<td>ಆ)</td>
<td>ಅತೀ ಹಿಂದುಳಿದ ಪ್ರವರ್ಗ-1ರ ಜಾತಿಗಳಲ್ಲಿ ಬರುವ ಅಲೆಮಾರಿ ಜನಾಂಗದವರಿಗೆ ಕುಲಶಾಸ್ತ್ರೀಯ ಅಧ್ಯಯನಕ್ಕಾಗಿ ಮೀಸಲಿಟ್ಟಿರುವ ಅನುದಾನವನ್ನು ಅಲೆಮಾರಿಗಳಲ್ಲದ ಜಾತಿಗಳ ಕುಲಶಾಸ್ತ್ರೀಯ ಅಧ್ಯಯನಕ್ಕೆ ಬಳಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td>
<td>2024-25ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಅಲೆಮಾರಿ/ಅರೆ-ಅಲೆಮಾರಿ ಜಾತಿಗಳ ಕುಲಶಾಸ್ತ್ರೀಯ ಅಧ್ಯಯನಕ್ಕಾಗಿಯೇ ಎಂದು ಪ್ರತ್ಯೇಕವಾಗಿ ಸಂಸ್ಥೆಗೆ ಅನುದಾನವು ಬಿಡುಗಡೆಯಾಗಿರುವುದಿಲ್ಲ. ಬಿಡುಗಡೆಯಾದ ಅನುದಾನದಲ್ಲಿ ಹಿಂದುಳಿದ ವರ್ಗಗಳ ಎಲ್ಲಾ ಪ್ರವರ್ಗಗಳಲ್ಲಿನ ಜನಾಂಗಗಳ ಕುಲಶಾಸ್ತ್ರೀಯ ಅಧ್ಯಯನ ಕೈಗೊಳ್ಳಲು ಅವಕಾಶವಿದ್ದು, ಅದರನ್ವಯ 8 ಅಲೆಮಾರಿ / ಅರೆ-ಅಲೆಮಾರಿ ಜನಾಂಗಗಳ ಹಾಗೂ ಪ್ರವರ್ಗ-1 ರಡಿ ಬರುವ ನದಾಫ್ / ಪಿಂಜಾರ ಜನಾಂಗದ ಕುಲಶಾಸ್ತ್ರೀಯ ಅಧ್ಯಯನವನ್ನು ಕೈಗೊಳ್ಳಲಾಗಿದೆ.</td>
</tr>
</table>

…3..

| | | |
|---|---|---|
| ಇ) | ಬಂದಿದ್ದಲ್ಲಿ, ಈ ರೀತಿಯಾಗಿ ಅಲಮಾರಿಗಳಲ್ಲದ ಜಾತಿಗಳಿಗೆ ಅನುದಾನವನ್ನು ಬಳಸಿಕೊಂಡು ಕುಲಶಾಸ್ತ್ರೀಯ ಅಧ್ಯಯನದ ಆದೇಶ ಮಾಡಿರುವ ಅಧಿಕಾರಿಗಳ ವಿರುದ್ಧ ಸರ್ಕಾರದ ಕ್ರಮಗಳೇನು; | ಅನ್ವಯಿಸುವುದಿಲ್ಲ. |
| ಈ) | ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆಯ ಮೇಲೆ ಪ್ರಭಾವ ಬೀರಿ ಅಲೆಮಾರಿಗಳ ಕುಲಶಾಸ್ತ್ರೀಯ ಅಧ್ಯಯನಕ್ಕಾಗಿ ಬಿಡುಗಡೆಯಾದ ಅನುದಾನವನ್ನು ದುರುಪಯೋಗ ಮಾಡಿಕೊಂಡಿರುವ ಅಧಿಕಾರಿಯ ವಿರುದ್ಧ ಯಾವ ರೀತಿಯ ಶಿಸ್ತುಕ್ರಮ ಜರುಗಿಸಲಾಗುವುದು? | |

ಸಂಖ್ಯೆ: ಹಿಂವಕ 389 ಬಿಎಂಎಸ್ 2025

(ಶಿವರಾಜ.ಎಸ್.ತಂಗಡಗಿ)
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.